ಸಾಕ್ಷಿಯನ್ನು ದಿಃ 08.08.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಜೆ.ಪಿ ವಕೀಲರಿಂದಃ

ದಾವಾ ಸ್ವತ್ತಿನ ಪಶ್ಚಿಮಕ್ಕೆ ಬರುವ ರಸ್ತೆ ಬಂಗಾರಪೇಟೆಯಿಂದ ಕಾಮಸಮುದ್ರಕ್ಕೆ ಹೋಗುವ ಮುಖ್ಯರಸ್ತೆ ಎಂದರೆ ಸರಿ. ಸದರಿ ರಸ್ತೆಗೆ ಸೇರಿದ ಗ್ರಾಮದ ಪೂರ್ವ ಮತ್ತು ಪಶ್ಚಿಮದ ಎರಡು ಬದಿಗಳಲ್ಲಿ ಮನಗಳು ಬರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ರಸ್ತೆಯ ಪಶ್ಚಿಮದಲ್ಲಿ ಈಗ 50-60 ಮನೆಗಳು ಬರುತ್ತವೆ ಎಂದು ತಿಳುಸುತ್ತಾರೆ. ಮುಖ್ಯ ರಸ್ತೆ ಪೂರ್ವಕ್ಕೆ ನನಗೆ ಸೇರಿದ ಒಂದು ಮನೆ ಮಾತ್ರ ಬರುತ್ತದೆ . ಮುಖ್ಯ ರಸ್ತೆ ಪೂರ್ವಕ್ಕೆ ಶಾರದಮ್ಮರವರ ಒಂದು ಮನೆ, ರಂಗಪ್ಪನ ಎರಡು ಮನೆ ಬರುತ್ತದೆ ಎಂದರೆ ಸರಿ. ಅದೇ ರೀತಿ ರಸ್ತೆಯ ಪೂರ್ವಕ್ಕೆ ಗೌರಮ್ಮರವರ ಮನೆ ಬರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಪೂರ್ವಕ್ಕೆ ನನ್ನ ಸಹೋದರ ಬಾಬುರವರ ಮನೆ ಸಹ ಬರುತ್ತದೆ ಎಂದರೆ ಸರಿ. ಸದರಿ ಬಾಬುರವರ ಮನೆಯ ಪೂರ್ವಕ್ಕೆ ಗೌರಮ್ಮನವರ ಮನೆ ಬರುತ್ತದೆ ಎಂದರೆ ಸರಿ.

ದಾವಾ ಸ್ವತ್ತಿನಲ್ಲಿ ಬರುವ ಮನೆಯನ್ನು 15 ವರ್ಷಗಳ ಹಿಂದೆ ಕಟ್ಟಿರುತ್ತೇನೆ. ಸದರಿ ಮನೆಯನ್ನು ಕಟ್ಟಲು ಪಂಚಾಯಿತಿಯಿಂದ ಪರವಾನಿಗೆ ಪಡೆದಿರುವುದಿಲ್ಲ. ನಾನು ಜಮೀನಿನಲ್ಲಿ ಮನೆ ಕಟ್ಟಿದ್ದು ಆ ಕಾರಣ ಪರವಾನಿಗೆ ಮತ್ತು ಅನುಮೋದಿತ ನಕಾಶೆಯನ್ನು ಪಡೆದಿರುವುದಿಲ್ಲ. ರಾಮಕೃಷ್ಣಪ್ಪ, ಶಾರದಮ್ಮ, ರಂಗಪ್ಪ, ಬಾಬು ಮತ್ತು ಗೌರಮ್ಮರವರ ಮನೆಗಳು ದಾವಾ ಸರ್ವೇನಂಬರ್ 5/1 ರಲ್ಲಿ ಇರುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿ ದಾವಾ ಸರ್ವೇನಂಬರ್ 5/1 ರಲ್ಲಿ ಬರುವ

ಜಾಗದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸದರಿ ಸರ್ವೇನಂಬರ್ 5/1 ರ 1 ಗುಂಟೆ ಪ್ರದೇಶದಲ್ಲಿ ಸಿಮೆಂಟ್ ಶೀಟ್ ಹಾಕಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗದ ಅಳತೆ 33X33 ಇದ್ದು ಅದರಲ್ಲಿ 29X29 ವರೆ ಅಡಿ ಜಾಗದಲ್ಲಿ 1 ನೇ ಪ್ರತಿವಾದಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಜಾಗದ ಪೂರ್ವಕ್ಕೆ ನನಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸಂದು ಮತ್ತು ಬಾಬುರವರ ಮನೆ ಮತ್ತು ದಕ್ಷಿಣಕ್ಕೆ ಸಂದು ಮತ್ತು ರಂಗಪ್ಪರವರ ಮನೆ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರದೇಶದಲ್ಲಿ ನನಗೆ ಸೇರಿದ ಒಂದು ಜಿಂಕ್ ಶೀಟ್ ಮನೆ ಬರುತ್ತದೆ. ಆ ರೀತಿ ನನಗೆ ಮನೆ ಇದೆ ಎಂದು ತೋರಿಸಲು ನಾನು ಪೋಟೋ ಹಾಜರುಪಡಿಸಿಲ್ಲ ಎಂದರೆ ಸರಿ. ಈಗ ತೋರಿಸಿದ ಪೋಟೋದಲ್ಲಿ ಕಾಣಿಸುವ ರಸ್ತೆ ಬಂಗಾರಪೇಟೆ - ಕಾಮಸಮುದ್ರ ರಸ್ತೆ ಎಂದರೆ ಸರಿಯಲ್ಲ. ಸದರಿ ಪೊಟೋದಲ್ಲಿ ಕಾಣುವ ಮನೆ ನನ್ನ ಸಹೋದರ ಬಾಬುಗೆ ಸೇರಿರುತ್ತದೆ ಎಂದರೆ ಇರಬಹುದು. ಸದರಿ ಪೋಟೋವನ್ನು ನಿಡಿ -1 ಎಂದು ಗುರುತಿಸಲಾಯಿತು.

ದಾವಾ ಸರ್ವೇನಂಬರ್ ನಲ್ಲಿ ನಾನು ಕಟ್ಟಿರುವ ಮನೆಯ ದಕ್ಷಿಣಕ್ಕೆ ನನಗೆ ಸೇರಿದ ಖಾಲಿ ಜಾಗ ಬರುತ್ತದೆ. ಸದರಿ ಖಾಲಿ ಜಾಗ ಸುಮಾರು 10 ಅಡಿ ಅಗಲ ಇರುತ್ತದೆ. ಉದ್ದ 100 ಅಡಿ ಮೇಲೆ ಇರುತ್ತದೆ. ಸದರಿ ಖಾಲಿ ಜಾಗದ ದಕ್ಷಿಣಕ್ಕೆ ರಂಗಪ್ಪನವರ ಮನೆ ಬರುತ್ತದೆ ಎಂದರೆ ಸರಿ. ಉತ್ತರಕ್ಕೆ 15 ಅಡಿ ಅಗಲ ಖಾಲಿ ಜಾಗ ಇರುತ್ತದೆ. ಅದರ ನಂತರ ನನ್ನ ಸಹೋದರ ಬಾಬುರವರ ಮನೆ ಬರುತ್ತದೆ. ಈಗ ತೋರಿಸಿದ ಪೋಟೋದಲ್ಲಿ ಕಾಣುವ ಮನೆಗಳು ದಾವಾ ಸರ್ವೇನಂಬರ್ 5/1 ರಲ್ಲಿ ಬರುವುದಿಲ್ಲ. ಸದರಿ ಮನೆಗಳು ಗ್ರಾಮದ ಒಳಗಡೆ ಬರುಬಹುದು ಈ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪೋಟೋವನ್ನು ಗುರುತಿಸಲು ವಾದಿ ಪರ

ವಕೀಲರು ತಕರಾರು ಮಾಡಿರುತ್ತಾರೆ, ಸದರಿ ತಕರಾರಿಗೆ ಒಳಪಟ್ಟು ಪೋಟೋವನ್ನು ನಿಡಿ -2 ಎಂದು ಗುರುತಿಸಲಾಯಿತು. ಪ್ರತಿವಾದಿ ಪತ್ರದ ಶೆಡ್ಯೂಲ್ ಸ್ವತ್ತಿನಲ್ಲಿ ಮೊದಲು ಒಂದು ಶಿಥಿಲಾವಸ್ಥೆ ಮನೆ ಇತ್ತು ಎಂದರೆ ಸರಿಯಲ್ಲ. ಸದರಿ ಮನೆಯ ಖಾತೆ ದಳವಾಯಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ ದಳವಾಯಪ್ಪರವರು ಆ ಸ್ವತ್ತನ್ನು ನನ್ನ ಅಜ್ಜಿ ಮುನಿಯಮ್ಮರವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಈ ಸಂಬಂಧ ಕ್ರಯಪತ್ರವಾಗಿದ್ದರು ಖಾತೆ ಬದಲಾವಣೆಯಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವುದೇ ಕ್ರಯಪತ್ರವಾಗಿಲ್ಲ ಎಂದು ಉತ್ತರಿಸಿರುತ್ತಾರೆ.

ದಾವಾ ಸರ್ವೇನಂಬರ್ 5/1 ರಲ್ಲಿ ನನ್ನ ಅಜ್ಜಿ ಮುನಿಯಮ್ಮ ಎಷ್ಟು ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಷ್ಟು ಜನಕ್ಕೆ ಜಾಗಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸರ್ವೇನಂಬರ್ 5/1 ರಲ್ಲಿ ರಂಗಪ್ಪ, ಚೆನ್ನಪ್ಪ, ವೆಂಕಟರಾಮಪ್ಪ, ಕದೀರಪ್ಪ, ರಾಮಕೃಷ್ಣಪ್ಪ ಮತ್ತು ಪ್ರತಿವಾದಿ 1 ರವರು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೂ ದಳವಾಯಪ್ಪನಿಗೂ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಸರ್ವೇನಂಬರ್ 5/1 ರಲ್ಲಿ ಮೇಲ್ಕಂಡರವರಿಗೆ 10 ಗುಂಟೆ ಜಾಗವನ್ನು ನನ್ನ ಅಜ್ಜಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಶೆಡ್ಯೂಲ್ ಸ್ವತ್ತಿನಲ್ಲಿ ಸರ್ಕಾರಿ ಅನುದಾನ ಪಡೆದು 1 ನೇ ಪ್ರತಿವಾದಿ 2005-2006 ನೇ ಸಾಲಿನಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಬಿದ್ದುಹೋಗುವ ಅಂತದಲ್ಲಿ ಇದ್ದ ಮನೆಯನ್ನು ತೆಗೆದು 1 ನೇ ಪ್ರತಿವಾದಿ ಸದರಿ ಸ್ಥಳದಲ್ಲಿ ಹೊಸ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ

1 ಮತ್ತು 2 ರವರು ಸದರಿ ಗ್ರಾಮದಲ್ಲಿ ಮನೆ ಕಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ . ಪ್ರತಿವಾದಿ 1 ರವರು ಪ್ರತಿವಾದದ ಪತ್ರದಲ್ಲಿ ನಮೂದಿಸಿರುವ ಸ್ವತ್ತನ್ನು ಗ್ರಾಮಪಂಚಾಯಿತಿಗೆ ಅಡಮಾನ ಮಾಡಿ ಹಣತೆಗೆದು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸರ್ವೇನಂಬರ್ 5/1 ರಲ್ಲಿ ಬರುವ ಮನೆಗಳ ಬಗ್ಗೆ ಪರಿಶೀಲನೆ ಮಾಡಲು ಕಮೀಷನರ್ ರವರನ್ನು ನೇಮಕಗೊಂಡು ಸ್ಥಳ ಪರಿಶೀಲನೆ ಮಾಡಿದ್ದಲ್ಲಿ ನನ್ನ ತಕರಾರು ಇರುವುದಿಲ್ಲ. ಪ್ರತಿವಾದದ ಪತ್ರದ ಸ್ವತ್ತಿನ ಸಂಬಂಧ ಖಾತೆ ನಂಬರ್ 75 ಎಂದು ಪಂಚಾಯಿತಿಯಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸರ್ವೇನಂಬರ್ ನಲ್ಲಿ ಕಟ್ಟಿರುವ ಮನೆಗೆ ಬಿಸ್ಕೇಟ್ ಕಲರ್ ಬಣ್ಣ ಹೊಡೆಯಲಾಗಿರುತ್ತದೆ. ಸಾಕ್ಷಿಗೆ ಪಿಂಕ್ ಕಲರ್ ತೋರಿಸಿ ಸದರಿ ಬಣ್ಣವನ್ನು ಮನೆಗೆ ಹೊಡೆದಿರುತ್ತಾರೆಯೇ ಎಂದರೆ ಸಾಕ್ಷಿ ಹೌದು ಎಂದು ತಿಳುಸುತ್ತಾರೆ.

ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**
(ಕೇಶವಮೂರ್ತಿ.ಬಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಬಂಗಾರಪೇಟೆ